ಉಳಿದದ್ದು ಬೌಲರ್‌ಗಳನ್ನು ಯಾವಮಟ್ಟಿಗೆ ಗೋಳು ಹೊಯ್ದುಕೊಂಡಿದ್ದಾರೆನ್ನುವುದಕ್ಕೆ ಸಾಕ್ಷಿ.

ಈ ಯುವಪ್ರತಿಭೆಯ ಹಿನ್ನೆಲೆಯನ್ನೊಮ್ಮೆ ಗಮನಿಸೋಣ. ಸರ್ಫರಾಜ್ ತಂದೆ ನೌಶಾದ್ ಖಾನ್. ಆಜಾದ್ ಮೈದಾನದಲ್ಲಿ ಅವರು ಶಿಬಿರ ನಡೆಸುತ್ತಿದ್ದರು. ಅಲ್ಲಿ ಕ್ರಿಕೆಟ್ ಆಟವಾಡುವ ಪ್ರತಿಭಾವಂತರನ್ನು ಬೆಳೆಸುವುದು ನೌಶಾದ್ ಹವ್ಯಾಸ. ಇಕ್ಬಾಲ್ ಅಬ್ದುಲ್ಲ, ಕಮ್ರಾನ್ ಖಾನ್ ತರಹದ ಪ್ರತಿಭೆಗಳನ್ನು ಸಾಣೆಗೊಡ್ಡಿದ ಶಿಬಿರ ಅದು. ಚಿಕ್ಕ ವಯಸ್ಸಿನಿಂದಲೇ ಮಗನ ಕ್ರೀಡಾಪ್ರತಿಭೆಗೂ ನೌಶಾದ್ ಖಾನ್ ಸಾಕ್ಷಿಯಾಗುತ್ತಾ ಬಂದರು. ದೂರದ ಮನೆಯಿಂದ ಆಜಾದ್ ಮೈದಾನಕ್ಕೆ ಹೋಗುವುದು ಚಳಿಗಾಲದಲ್ಲಿ ಕಷ್ಟವಿತ್ತು. ಅದಕ್ಕೇ ಮನೆಯ ಪಕ್ಕದಲ್ಲೇ ಸಿಂಥೆಟಿಕ್ ಪಿಚ್ ಹಾಕಿಸಿಕೊಟ್ಟಿದ್ದರು. ಅಲ್ಲಿ ಮಗನ ಅಭ್ಯಾಸ. ಒಂದು ಕಾಲದಲ್ಲಿ ಅಲ್ಲಿ ಚೆಂಡು ವಿಪರೀತ ಎತ್ತರಕ್ಕೆ ಪುಟಿಯುತ್ತಿತ್ತು. ಆಗ ತಮಾಷೆಯಾಗಿ ಅಭ್ಯಾಸ ಮಾಡಿದ್ದೇ ಅಷ್ಟೇನೂ ಎತ್ತರವಲ್ಲದ ಸರ್ಫರಾಜ್ ಖಾನ್‌ಗೆ ವರದಾನವಾಯಿತು. ಅಲ್ಲಿ ಆಡಿದ್ದರಿಂದ ಬೌನ್ಸರ್‌ಗಳನ್ನು ಎದುರಿಸುವ ಕೌಶಲ ಕರಗತವಾಯಿತು.

2009ರಲ್ಲಿ ಹ್ಯಾರಿಸ್ ಶೀಲ್ಡ್ ಪಂದ್ಯದಲ್ಲಿ 421 ಎಸೆತಗಳಲ್ಲಿ 439 ರನ್ ಗಳಿಸಿ, ಸಚಿನ್ ತೆಂಡೂಲ್ಕರ್ ದಾಖಲೆಯನ್ನು ಸರ್ಫರಾಜ್ ಅಳಿಸಿದರು. ಆಗಿನ್ನೂ 12ರ ಬಾಲಕ. 56 ಬೌಂಡರಿಗಳು, 12 ಸಿಕ್ಸರ್‌ಗಳನ್ನು ಒಳಗೊಂಡ ಆ ಇನಿಂಗ್ಸ್ ಅನೇಕರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಬಾಲಪ್ರತಿಭೆಯಾಗಿ ಮೆರೆದ ಮೇಲೆ ಮುಂಬೈನ 19 ವರ್ಷದೊಳಗಿನವರ ತಂಡದ ಪರವಾಗಿ ಆಡತೊಡಗಿದ ಹುಡುಗ, 2013ರಲ್ಲಿ ದಕ್ಷಿಣ ಆಫ್ರಿಕಾದ 19 ವರ್ಷದೊಳಗಿನವರ ತಂಡದ ವಿರುದ್ಧ ಪಂದ್ಯವೊಂದರಲ್ಲಿ 66 ಎಸೆತಗಳಲ್ಲಿ 101 ರನ್ ಗಳಿಸಿ ರಾಷ್ಟ್ರೀಯ ತಂಡದ ಗೌರವವನ್ನೂ ಹೆಚ್ಚಿಸಿದ. 2016ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್‌ನಲ್ಲಿ ಭಾರತ ರನ್ನರ್ ಅಪ್ ಆಯಿತಲ್ಲ, ಆಗ ಸರ್ಫರಾಜ್ ಹೆಸರು ಅಧಿಕ ರನ್ ಗಳಿಸಿದವರ ಪಟ್ಟಿಯಲ್ಲಿ ಎರಡನೆಯದ್ದಾಗಿತ್ತು. ಒಟ್ಟು 355 ರನ್‌ಗಳನ್ನು 71ರ ಸರಾಸರಿಯಲ್ಲಿ ಆಗ ಸೇರಿಸಿದ್ದ. ಐದು ಅರ್ಧ ಶತಕಗಳು ಅದರಲ್ಲಿ ಸೇರಿದ್ದವು.

ಸುನಿಲ್ ಗಾವಸ್ಕರ್, ಸಂಜಯ್ ಮಂಜ್ರೇಕರ್, ವಸೀಂ ಜಾಫರ್, ರೋಹಿತ್ ಶರ್ಮ, ವಿಜಯ್ ಮರ್ಚೆಂಟ್, ಅಜಿತ್ ವಾಡೇಕರ್ ಇವರೆಲ್ಲರ ಹೆಸರುಗಳು ಇರುವ ಪಟ್ಟಿಗೆ ಜ. 22ರಂದು ಸರ್ಫರಾಜ್ ಖಾನ್ ಅವರ ನಾಮಧೇಯವೂ ಸೇರ್ಪಡೆಯಾಯಿತು. ಮುಂಬೈ ತಂಡದ ಪರ ರಣಜಿ ಟೂರ್ನಿಯ ಪಂದ್ಯದಲ್ಲಿ ತ್ರಿಶತಕ ಗಳಿಸಿದವರ ಪಟ್ಟಿ ಇದು. ವಸೀಂ ಜಾಫರ್ ಮಾತ್ರ ರಣಜಿಯಲ್ಲಿ ಎರಡು ಸಲ ತ್ರಿಶತಕ ಹೊಡೆದ ಮುಂಬೈನ ಬ್ಯಾಟ್ಸ್‌ಮನ್ ಎನಿಸಿಕೊಂಡಿದ್ದಾರೆ.

ಉತ್ತರ ಪ್ರದೇಶದ ವಿರುದ್ಧ ನಡೆದ ರಣಜಿ ಪಂದ್ಯದಲ್ಲಿ 625 ರನ್‌ಗಳ (8 ವಿಕೆಟ್ ನಷ್ಟಕ್ಕೆ) ಮೊದಲ ಇನಿಂಗ್ಸ್‌ನ ದೊಡ್ಡ ಮೊತ್ತ ಎದುರಲ್ಲಿ ಇತ್ತು. ಮುಂಬೈ ತಂಡ ಅದನ್ನು ದಾಟಿದರಷ್ಟೇ ಮೂರು ಅಂಕ ಗಳಿಸುವುದು ಸಾಧ್ಯವಿತ್ತು. ಸರ್ಫರಾಜ್ ಕಳೆದ ಮೂರು ರಣಜಿ ಋತುಗಳಲ್ಲಿ ಉತ್ತರ ಪ್ರದೇಶವನ್ನು ಪ್ರತಿನಿಧಿಸಿದ್ದರು. ಈ ಸಲ ಮುಂಬೈ ತಂಡವನ್ನು ಮರಳಿ ಸೇರಿಕೊಂಡ ಅವರು ಪಂದ್ಯ ಶುರುವಾದ ನಂತರ ಎರಡು ದಿನ ಜ್ವರದಿಂದ ಬಳಲಿದ್ದರು. ವಿಕೆಟ್‌ಗಳು ಬಿದ್ದಾಗಲೆಲ್ಲ ತಾನು ಹೋಗಿ ಬ್ಯಾಟಿಂಗ್ ಮಾಡಿ, ತಂಡವನ್ನು ಕಾಪಾಡಬೇಕಲ್ಲ ಎಂಬ ಚಡಪಡಿಕೆ.



ಆರನೇ ಕ್ರಮಾಂಕದ ಆಟಗಾರನಾಗಿ ಅವರು ಕಣಕ್ಕೆ ಇಳಿದಾಗ ಮುಂಬೈ 338 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡಿತ್ತು. ಇನ್ನೂ 350 ರನ್‌ಗಳನ್ನು ಬಾಲಂಗೋಚಿ ಬ್ಯಾಟ್ಸ್‌ಮನ್‌ಗಳನ್ನು ಎದುರಲ್ಲಿ ಇಟ್ಟುಕೊಂಡು ಗಳಿಸುವ ಸವಾಲಿನ ಘಟ್ಟವದು. 30 ಬೌಂಡರಿ, 8 ಸಿಕ್ಸರ್‌ಗಳ ಇನಿಂಗ್ಸ್‌ನಲ್ಲಿ ಸರ್ಫರಾಜ್ ಸಾಕಷ್ಟು ಬಳಲಿದರು. 250 ರನ್ ಗಳಿಸಿದ ಮೇಲೆ ಇನಿಂಗ್ಸ್ ಡಿಕ್ಲೇರ್ ಮಾಡಿಕೊಳ್ಳಬೇಕು ಎನ್ನುವಷ್ಟು ಸುಸ್ತು ಅವರನ್ನು ಕಾಡಿತ್ತು. ಆದರೆ, ತಂಡದ ಇತರ ಆಟಗಾರರು ಹಾಗೆ ಮಾಡದಂತೆ ಅವರಿಗೆ ಸಾಥ್ ನೀಡಿದರು. ಸರ್ಫರಾಜ್ ಅಂದುಕೊಂಡಿದ್ದನ್ನು ಸಾಧಿಸಿಯೇಬಿಟ್ಟರು.

2015ರಲ್ಲಿ ಸರ್ಫರಾಜ್ ಖಾನ್ ಹತಾಶರಾಗಿದ್ದರು. ಮುಂಬೈ ತಂಡದಲ್ಲಿ ಅವಕಾಶಗಳು ಸಿಗದೇಹೋದದ್ದು ಅವರನ್ನು ಬೇಸರಕ್ಕೆ ದೂಡಿದ್ದುದು ನಿಜ. ಆಗಿನ್ನೂ ಹದಿನೇಳು ವಯಸ್ಸು. ಅವರ ತಂದೆ ಉತ್ತರ ಪ್ರದೇಶ ತಂಡದ ಪರವಾಗಿ ರಣಜಿ ಆಡುವುದೊಂದೇ ಮಾರ್ಗ ಎಂದು ತಿಳಿಹೇಳಿದರು. ಒಲ್ಲದ ಮನಸ್ಸಿನಿಂದಲೇ ಆಗ ಸರ್ಫರಾಜ್ ಆ ತಂಡಕ್ಕೆ ಹೋಗಿದ್ದರು. ಮತ್ತೆ ಮುಂಬೈ ತಂಡದ ಪರವಾಗಿ ಆಡುವ ಭಾಗ್ಯ ತನ್ನದಾಗುವುದೋ ಇಲ್ಲವೋ ಎಂಬ ದೊಡ್ಡ ಪ್ರಶ್ನೆ ಅವರ ತಲೆಯಲ್ಲಿ ಇತ್ತು. ಆದರೆ, ಅಲ್ಲಿ ಆಡಿಬಂದಿದ್ದೇ ಅವರಿಗೆ ಈ ಋತುವಿನಲ್ಲಿ ವರದಾನವಾಯಿತು. ಉತ್ತರ ಪ್ರದೇಶದ ಬಹುತೇಕ ಬೌಲರ್‌ಗಳ ತಂತ್ರವನ್ನು ಅರಿತಿದ್ದ ಅವರು ಇಲ್ಲಿ ಅವರನ್ನು ಹಣ್ಣುಗಾಯಿ ನೀರುಗಾಯಿ ಮಾಡಿದರು.

ವಿಜಯ್ ಹಜಾರೆ ಟ್ರೋಫಿ ಪಂದ್ಯಗಳಲ್ಲಿ ಈ ಆಟಗಾರನಿಗೆ ಅವಕಾಶವೇ ಸಿಕ್ಕಿರಲಿಲ್ಲ. ಸಯ್ಯದ್ ಮುಷ್ತಾಕ್ ಅಲಿ ಟ್ರೋಫಿಯ ಪಂದ್ಯಗಳಲ್ಲಿ ಆಗೀಗ ಅವಕಾಶ ಸಿಕ್ಕಿತಷ್ಟೆ. ಆದರೆ, ರಣಜಿಯಲ್ಲಿ ಕರ್ನಾಟಕ ವಿರುದ್ಧದ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಔಟಾಗದೆ 71 ರನ್ ಗಳಿಸಿದ ಮೇಲೆ ಆತ್ಮವಿಶ್ವಾಸ ಹೆಚ್ಚಾಯಿತು.

ಹಿಮಾಚಲಪ್ರದೇಶದ ವಿರುದ್ಧ ನಡೆ ಪಂದ್ಯದ ಮೊದಲ ಇನಿಂಗ್ಸ್‌ನಲ್ಲೂ ಅವರು ಕಣಕ್ಕೆ ಇಳಿದದ್ದು ಐದನೇ ಬ್ಯಾಟ್ಸ್‌ಮನ್ ಆಗಿ. 32 ಬೌಂಡರಿ, 4 ಸಿಕ್ಸರ್‌ಗಳ ಮನರಂಜನೆ ನೀಡಿದ ಅವರು ಕೇವಲ 213 ಎಸೆತಗಳಲ್ಲಿ 226 ರನ್ ಸೇರಿಸಿ ಔಟಾಗದೆ ಉಳಿದರು.

ಥರ್ಡ್‌ಮನ್ ಫೀಲ್ಡರ್ ನಿಂತಿದ್ದರೂ ಅಪ್ಪರ್ ಕಟ್ ಮಾಡಿ ಅಪ್ಪನಿಂದ ಬೈಯಿಸಿಕೊಳ್ಳುತ್ತಿದ್ದ, ವೈಟ್ ಬಾಲ್‌ನಲ್ಲಿ ಆಡಲಷ್ಟೇ ಲಾಯಕ್ಕು ಎಂದು ತರಬೇತುದಾರರೂ ಒಮ್ಮೆ ಹೇಳುವಂತೆ ಮಾಡಿದ್ದ, ‘ಪಾಂಡಾ ಪಾಂಡಾ’ ಎಂದು ಸ್ನೇಹಿತರಿಂದ ಪೆಟ್‌ನೇಮ್ ಪಡೆದಿದ್ದ ಸರ್ಫರಾಜ್ ಈಗ ‘ಮಾಚೋ’ ಎಂಬ ಗುಣವಿಶೇಷಣವನ್ನು ಪಡೆದುಕೊಂಡಿದ್ದಾರೆ.

ಇಪ್ಪತ್ತೆರಡರ ಹರೆಯದ ಸರ್ಫರಾಜ್, ಪಂದ್ಯದ ಗತಿಯನ್ನು ಬದಲಿಸಬಲ್ಲ ಮಧ್ಯಮ ಕ್ರಮಾಂಕದ ಪ್ರತಿಭೆಯಾಗಿ ಬೆಳೆಯುತ್ತಿದ್ದಾರೆ. ‘ಕಲಿಯಬೇಕಾದದ್ದು ಇನ್ನೂ ಇದೆ’ ಎನ್ನುವ ಅವರ ಮಾತು ಹಾಗೇ ಉಳಿದರೆ, ಅವರು ಇನ್ನಷ್ಟು ಮೆಟ್ಟಿಲುಗಳನ್ನು ಏರುವುದರಲ್ಲಿ ಸಂಶಯವಿಲ್ಲ. ■